

# ಮತ್ತೊಂದು ಕನ್ನಡ ಸಿನಿಮಾದಲ್ಲಿ ಬಾಬಿ ಸಿಂಹ

ತಮಿಳಿನ ಖ್ಯಾತ ನಟ ಬಾಬಿ ಸಿಂಹ, ಮತ್ತೊಂದು ಕನ್ನಡ ಸಿನಿಮಾದಲ್ಲಿ ನಟಿಸುತ್ತಿದ್ದಾರೆ.

'ಜಿಗರ್‌ಥಂಡ' ಸಿನಿಮಾದ ನಟನೆಗಾಗಿ ರಾಷ್ಟ್ರಪ್ರಶಸ್ತಿ ಪಡೆದಿದ್ದ ಬಾಬಿ, '777 ಚಾರ್ಲಿ' ಮೂಲಕ ಚಂದನವನ ಪ್ರವೇಶಿಸಿದ್ದರು. ಇದೀಗ ರಘು ಕೋವಿ ನಿರ್ದೇಶನದಲ್ಲಿ ತಯಾರಾಗುತ್ತಿರುವ ಸಿನಿಮಾದಲ್ಲಿ ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ರಘು ಕೋವಿ ಚೊಚ್ಚಿಲ ನಿರ್ದೇಶನದ ಸಿನಿಮಾ ಕೂಡ ಇದಾಗಿದೆ. ಹಂಸಲೇಖ ಕಥಾ ಕಣಜದಿಂದ ಚಂದನವನಕ್ಕೆ ಪರಿಚಿತರಾದ ರಘು ಕೋವಿ, 'ಕೃಷ್ಣಲೀಲಾ' ಸಿನಿಮಾದಲ್ಲಿ ಅತ್ಯುತ್ತಮ ಬರವಣಿಗೆಗೆ ರಾಜ್ಯ ಪ್ರಶಸ್ತಿ ಪಡೆದುಕೊಂಡಿದ್ದಾರೆ. ರಾಜೇಂದ್ರ ಸಿಂಗ್ ಬಾಬು, ಎಸ್.ಎಸ್. ರಾಜಶೇಖರ್, ಕೆ.ವಿ. ರಾಜ್, ಶಶಾಂಕ್, ಉಪೇಂದ್ರ ಸಿನಿಮಾಗಳಲ್ಲಿ ಸಹ ನಿರ್ದೇಶಕರಾಗಿ ಕೆಲಸ ಮಾಡಿ ಅನುಭವ ಗಳಿಸಿಕೊಂಡಿರುವ ಅವರು, ಇದೀಗ ಡೈರೆಕ್ಟರ್ ಕ್ಯಾಪ್ ತೊಟ್ಟು ಸಿನಿಮಾ ಅಖಾಡಕ್ಕಿಳಿದಿದ್ದಾರೆ.

'ದಿಲ್ ಮಾರ್' ಹೀರೊ ರಾಮ್ ಈ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಬಾಬಿ ಸಿಂಹ ನಿರ್ವಹಿಸುವ ಪಾತ್ರದ ಬಗ್ಗೆ ಚಿತ್ರತಂಡ ಗುಟ್ಟುಬಿಟ್ಟುಕೊಟ್ಟಿಲ್ಲ.

ನೈಜ ಘಟನೆಯಾಧಾರಿತ ಸಿನಿಮಾ ಇದಾಗಿದ್ದು, ಚಿತ್ರತಂಡ ಶೀಘ್ರದಲ್ಲಿಯೇ ಶೀರ್ಷಿಕೆ ಬಿಡುಗಡೆ ಮಾಡಲಿರುವುದಾಗಿ ತಿಳಿಸಿದೆ. ಕನ್ನಡ, ತೆಲುಗು, ತಮಿಳು ಹಾಗೂ ಹಿಂದಿ ಭಾಷೆಯಲ್ಲಿ ಸಿನಿಮಾ ಹೊರತರುವ ಯೋಜನೆಯೂ ಚಿತ್ರತಂಡಕ್ಕಿದೆ. ■



# ಹಾರರ್ ಕಥೆಗಳ ಜೊತೆ ಪ್ರಿಯಾಂಕಾ

ಹಾರರ್ ಕಥಾಹಂದರದ ಸಿನಿಮಾದಲ್ಲಿ ನಟಿಸುವುದೆಂದರೆ ತಮಗೆ ತುಂಬಾ ಇಷ್ಟ ಎಂದು ಹೇಳಿಕೊಂಡಿರುವ ನಟಿ ಪ್ರಿಯಾಂಕಾ ಉಪೇಂದ್ರ, ಸದ್ಯ ಮತ್ತೊಂದು ಹಾರರ್ ಸಿನಿಮಾದಲ್ಲಿ ಅಭಿನಯಿಸಲು ಅಣಿಯಾಗುತ್ತಿದ್ದಾರೆ.

ಲೋಹಿತ್ ಎಚ್. ನಿರ್ದೇಶನದಲ್ಲಿ ಮೂಡಿಬರುತ್ತಿರುವ, ಇನ್ನೂ ಹೆಸರಿಡದ ಚಿತ್ರವೊಂದಕ್ಕೆ ಪ್ರಿಯಾಂಕಾ ಸಹಿ ಹಾಕಿದ್ದು, ಲೋಹಿತ್ ಅವರ ಜೊತೆ ಪ್ರಿಯಾಂಕಾ ಅವರ ಮೂರನೇ ಸಿನಿಮಾ ಇದಾಗಿದೆ. 'ಮಮ್ಮಿ' ಹಾಗೂ 'ದೇವಕಿ' ಸಿನಿಮಾ ನಂತರ ಅದೇ ಧಾಟಿಯ ಮತ್ತೊಂದು ಸಿನಿಮಾ ಸಿದ್ಧತೆ ನಡೆಯುತ್ತಿದೆ.

ಪ್ರಿಯಾಂಕಾ, ಹಾರರ್ ಸಿನಿಮಾಗಳ ಕಟ್ಟಾ ಅಭಿಮಾನಿ. ಈ ಬಗ್ಗೆ ಅವರೇ ಮಾತನಾಡಿದ್ದು, 'ಹಾರರ್, ನನ್ನ ಫೇವರೆಟ್ ಜಾನರ್ ಹಾಗೂ ಅದರಲ್ಲಿ ಸಾಧ್ಯವಿರುವ ಪ್ರತಿ ಬಗೆಯನ್ನೂ ನಾನು ನೋಡುತ್ತೇನೆ. ಡಿಟೆಕ್ಟಿವ್, ಹಾರರ್, ಹೋಮ್ಲಿ, ಮಾಸ್– ಹೀಗೆ ಎಲ್ಲಾ ಥರದ ಸಿನಿಮಾ ಅವಕಾಶಗಳು ಬರುತ್ತಿವೆ. ಹೀಗಿದ್ದೂ ಹಾರರ್ ಸಿನಿಮಾಗಳತ್ತಲೇ ನನ್ನ ಕಣ್ಣು ಹೊರಳುತ್ತದೆ. ಇದನ್ನು ನಾನು ಸ್ಟಿರಿಯೊಟೈಪ್ ಆಗುತ್ತಿದ್ದೇನೆ ಎಂದುಕೊಳ್ಳುವುದಿಲ್ಲ' ಎಂದಿದ್ದಾರೆ.

ಸಿನಿಮಾದಲ್ಲಿ ಏಕತಾನತೆಯ ಪಾತ್ರಗಳ ಕುರಿತು ಮಾತನಾಡಿರುವ ಅವರು, 'ನಿಮ್ಮ ಬಳಿ ಒಂದೇ ಧಾಟಿಯ ಪಾತ್ರಗಳು ಬರುತ್ತಿವೆ ಎಂದಾದರೆ, ನೀವು ಅದಕ್ಕೆ ತುಂಬಾ ಚೆನ್ನಾಗಿ ಒಪ್ಪುತ್ತೀರಿ ಎಂದರ್ಥ' ಎಂದು ಹೇಳಿದ್ದಾರೆ. ಸದ್ಯ ಗೋವಾದಲ್ಲಿ ಹೊಸ ಸಿನಿಮಾದ ಶೂಟಿಂಗ್ ಮುಗಿಸಿದ್ದಾರೆ ಪ್ರಿಯಾಂಕಾ. ■